ದಿನಾಂಕಃ **09-11-2022**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಬಿ ಜೆ ಆರ್ ವಕೀಲರಿಂದಃ</u>

1 ನೇ ಪ್ರತಿವಾದಿಯ ಗಂಡನ ಹೆಸರು ರಾಮಯ್ಯ . ಆತನಿಗೆ ಇಬ್ಬರು ಗಂಡು , ಒಂದು ಹೆಣ್ಣು ಮಗಳು. ಅವರಿಗೆ 3 ಸ್ವತ್ತುಗಳು ಇವೆ. ನಾನು 2 ನೇ ಪ್ರತಿವಾದಿ ಪರ ಸಾಕ್ಷಿ ಹೇಳಲು ಬಂದಿರುತ್ತೇನೆ , ಅವರು , ನಾನು ಒಂದೇ ಗ್ರಾಮದವರು. ನಮ್ಮ ಮತ್ತು ಅವರ ಕುಟುಂಬದ ನಡುವೆ ಯಾವುದೇ ವ್ಯವಹಾರವಿಲ್ಲ , ಆತನನ್ನು ನೋಡಿದ್ದೇನೆ. ಅವರ ಕುಟುಂಬದ ಆರ್ಥಿಕ ವ್ಯವಹಾರಗಳು ನನಗೆ ಗೊತ್ತಿಲ್ಲ.

ಸರ್ಕಾರದಿಂದ ರಾಮಯ್ಯನಿಗೆ ಸೈಟು ಮಂಜೂರಾಗಿತ್ತು ಎಂದರೆ ಸರಿ. ಆತನಿಗೆ 1 ಜಮೀನು ಮತ್ತು 3 ಸೈಟು ಇತ್ತು. ಈ ಸ್ವತ್ತುಗಳು ರಾಮಯ್ಯನ ಕುಟುಂಬದ ಸ್ವತ್ತುಗಳು ಎಂದರೆ ಸಾಕ್ಷಿಯು ಮೊದಲೇ ಬೇರೆ ಹೋಗಿದ್ದರು ಎಂದು ನುಡಿಯುತ್ತಾರೆ. ಮನೆಯಲ್ಲಿ ಹೊಂದಾಣಿಕೆ ಇಲ್ಲದೆ ಬೇರೆ ಇದ್ದರು ಎಂದರೆ ಸಾಕ್ಷಿಯು ಯಾವ ವಿಚಾರಕ್ಕೆ ಗೊತ್ತಿಲ್ಲ , ಒಟ್ಟಿನಲ್ಲಿ ಬೇರೆ ಇದ್ದರು ಎಂದು ನುಡಿಯುತ್ತಾರೆ. ಲಕ್ಷ್ಮಯ್ಯ ರಾಮಯ್ಯನಿಗೆ ದಾಖಲೆ ಕೊಟ್ಟು ಹೊರ ಹೋಗಿರುವುದನ್ನು ನಾನು ನೋಡಿಲ್ಲ.

4 ನೇ ಪ್ರತಿವಾದಿಯ ಗಂಡ ನನ್ನ ಮಾವನಾಗಬೇಕು. ಲಕ್ಷ್ಮಯ್ಯ ಮತ್ತು ಬಸವರಾಜು , ರಾಮಯ್ಯನವರು ನನನ್ನು ಪಂಚಾಯ್ತಿಗೆ ಕರೆದಿದ್ದರು. ದಾವಾ ಸ್ವತ್ತುಗಳನ್ನು ಹಗ್ಗ ಹಿಡಿದು ಅಳತೆ ಮಾಡಿಕೊಟ್ಟಿರುತ್ತಾರೆ. ರಂಗಪ್ಪ ಎಂಬುವರು ಸ್ಥಳದಲ್ಲಿ ಪತ್ರ ಬರೆದಿರುತ್ತಾರೆ ಪತ್ರವನ್ನು ಬರೆದ ನಂತರ ಎಲ್ಲರ ಸಹಿ ಮಾಡಿಸಿ, ಒಂದು ಜರಾಕ್ಸ್ ತೆಗೆದು ಅಸಲು ಪತ್ರವನ್ನು ವಾದಿಗೆ ಜರಾಕ್ಸ್ ನ್ನು ಲಕ್ಷ್ಮಯ್ಯನಿಗೆ ನೀಡಿದ್ದರು , ಆ ಸಮಯದಲ್ಲಿ ರಾಮಯ್ಯ ಬದುಕಿದ್ದರು. ಆ ದಿನ ಬರೆದ ದಾಖಲೆ ಅಸಲು ಪ್ರತಿ ಅವರ ತಾಯಿಯ ಬಳಿ ಇದೆ ಎಂದರೆ ಸಾಕಿಯು

ವಾದಿಯ ಬಳಿ ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಂಚಾಯ್ತಿ ಖಾತೆಗಳು ಇದುವರೆಗೂ ಬದಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿವೇಶನ ನಂ.97 ನ್ನು ಸರ್ಕಾರದಿಂದ ರಾಮಯ್ಯನ ಹೆಸರಿಗೆ ಮಂಜೂರುಮಾಡಲಾಗಿತ್ತು ಎಂದರೆ ಸರಿ , ಅದು ಪಂಚಾಯ್ತಿ ಪಾಲು ಪಟ್ಟಿ ಬರೆಯುವ ಮೊದಲೇ ಮಂಜೂರಾಗಿತ್ತು ಎಂದರೆ ಸರಿ , ಸದರಿ ಸ್ವತ್ತು ರಾಮಯ್ಯನ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಪಂಚಾಯ್ತಿ ಪಾಲು ಪಟ್ಟಿಯನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಲಕ್ಷ್ಮಯ್ಯನಿಗೆ ಅನುಕೂಲವಾಗಲೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.